ಮಗು ಮತ್ತು ಪೋಷಕರ ನಡುವಿನ ಅಂತರ ಇಲ್ಲವಾಗಿಸಲು ಪ್ರಾರಂಭಗೊಂಡಿರುವ ಬೆಂಗಳೂರಿನ ಮೊದಲ ಮಾರ್ಗದರ್ಶನ ಕೇಂದ್ರ 'ಪ್ರೇರಣಾ'. ಇಂಥ ಮಕ್ಕಳ ಬಗ್ಗೆಯೇ ಅತ್ಯಂತ ಕಾಳಜಿ ವಹಿಸುವವರು ಮೀರಾ ರವಿ. ಕಳೆದ 8 ವರ್ಷಗಳಿಂದ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅವರು ಮಕ್ಕಳು ನಿರಾತಂಕವಾಗಿ, ಮುಕ್ತವಾಗಿ ತಮ್ಮ ಸಮಸ್ಯೆಗಳನ್ನು ಹೊರಹಾಕಲು ಅನುಕೂಲವಾಗುವಂತೆ ತಮ್ಮ ಕೇಂದ್ರವನ್ನು ರೂಪಿಸಿದ್ದಾರೆ.

'ಪ್ಲೇ ಥೆರಪಿ' ಮೂಲಕ ಮಕ್ಕಳಿಗೆ ಕೌನ್ಸೆಲಿಂಗ್ ನಡೆಸುತ್ತಾರೆ.ಮಕ್ಕಳು ಹಾಗೂ ಯುವಕ, ಯುವತಿಯರನ್ನು ನಿಭಾಯಿಸುವ ರೀತಿ ಕುರಿತು ಹಲವು ಕಾರ್ಯಾಗಾರಗಳನ್ನೂ ನಡೆಸಿದ್ದಾರೆ.

'ಅಧ್ಯಯನ ಮಾರ್ಗದರ್ಶಿ' ಮತ್ತು 'ಸ್ವಪರಿಚಯದ ಮೂಲಕ

ಮಾರ್ಗದರ್ಶನ ಕೇಂದ್ರ 'ಪ್ರೇರಣಾ'. ಇಂಥ ಮಕ್ಕಳ ಬಗ್ಗೆಯೇ ಅತ್ಯಂತ



ಜನರನ್ನು ನಿಭಾಯಿಸುವ ಕುರಿತು ಅವರು ಹೀಗೆನ್ನುತ್ತಾರೆ - " ನಡವಳಿಕೆ ಅಭಿವ್ಯಕ್ತಿಯ ಒಂದು ವಿಧಾನ. ಮಗು ಏನನ್ನೋ ಹೇಳಲು ಪ್ರಯತ್ನಿಸುತ್ತಿದೆ. ತನ್ನ ಕೆಲವು ಬೇಡಿಕೆಗಳನ್ನು ಆಲೋಚಿಸುತ್ತಿಲ್ಲ ಎಂದು ಹೇಳುತ್ತಿದೆ. ಆದರೆ ನೀವು ಅದನ್ನೇ ಮಗು ಸೋಮಾರಿ, ಹಟಮಾರಿ, ಆಕ್ರಮಣಕಾರಿ, ತೊಂದರೆ ಉಂಟುಮಾಡುತ್ತಿದೆ ಎಂದು ಪರಿಗಣಿಸುವ ಬದಲು ಅದು ಏನನ್ನು ಹೇಳಲು ಯತ್ನಿಸುತ್ತಿದೆ ಎಂಬುದನ್ನು ಅರಿಯಲು

